
# ಅರಿವಿನ ಸತಿ ಶರಣೆ ಆಯ್ದಕ್ಕಿ ಲಕ್ಕಮ್ಮ



## ಸಂಕ್ಷಿಪ್ತ ಪರಿಚಯ

### ಲಕ್ಕಮ್ಮ

ಪತಿ–ಮಾರಯ್ಯ ಊರು–ಯರಡೋಣಾ ಜಿಲ್ಲೆ ರಾಯಚೂರು ಕಾಯಕ–ಗೃಹಿಣಿ
ಕಾರ್ಯಕ್ಷೇತ್ರ–ಕಲ್ಯಾಣ, ಬೀದರಜಿಲ್ಲೆ ದೊರೆತ ವಚನಗಳು–೨೫ ವಚನಾಂಕಿತ–ಮಾರಯ್ಯಪ್ರಿಯ ಅಮರೇಶ್ವರಲಿಂಗ
ಲಿಂಗೈಕ್ಯ–ಕಲ್ಯಾಣ, ಬೀದರಜಿಲ್ಲೆ ಪೂರ್ವಾಶ್ರಮ–ದಲಿತವರ್ಗ

## ವಚನ

**ಆಸೆಯೆಂಬುದು ಅರಸಿಂಗಲ್ಲದೆ, ಶಿವಭಕ್ತರಿಗುಂಟೆ ಅಯ್ಯಾ?**
**ರೋಷವೆಂಬುದು ಯಮದೂತರಿಗಲ್ಲದೆ,**
**ಅಜಾತರಿಗುಂಟೆ ಅಯ್ಯಾ? ಈಸಕ್ಕಿಯಾಸೆ ನಿಮಗೇಕೆ? ಈಶ್ವರನೊಪ್ಪ,**
**ಮಾರಯ್ಯ ಪ್ರಿಯ ಅಮರೇಶ್ವರಲಿಂಗಕ್ಕೆ ದೂರ ಮಾರಯ್ಯ.**

## ಅರಿವಿನಕ್ಷರದಾರತಿ




**"ಚಿತ್ತ ಶುದ್ಧದಲ್ಲಿ ಕಾಯಕವ ಮಾಡುವಲ್ಲಿ**
**ಸದ್ಭಕ್ತಂಗೆ ಎತ್ತ ನೋಡಿದಡತ್ತ ಲಕ್ಷ್ಮಿ**
**ತಾನಾಗಿಪ್ಪಳು."**



# ಎಚ್ಚರಿಕೆ ಕಾಯಕದ ಶರಣ ಮುಕ್ತನಾಥಯ್ಯ



## ಸಂಕ್ಷಿಪ್ತ ಪರಿಚಯ

### ಮುಕ್ತನಾಥಯ್ಯ-ಮುತ್ತಣ್ಣ

ಕಾಯಕ–ಬೆಳಗಿನ ಜಾವ ಜನರನ್ನು ಕೂಗಿ ಎಬ್ಬಿಸುವುದು. ಕಾರ್ಯಕ್ಷೇತ್ರ–ಕಲ್ಯಾಣ, ಬೀದರಜಿಲ್ಲೆ
ದೊರೆತ ವಚನಗಳು–೧೧ ವಚನಾಂಕಿತ–ಶುದ್ಧಸಿದ್ಧ ಪ್ರಸಿದ್ಧ ಪ್ರಸನ್ನ ಕುರಂಗೇಶ್ವರಲಿಂಗ

## ವಚನ

**ಅಂಗವಿಕಾರ ಸಾಕೇಳಿ, ಬಹುವಿಡಂಗದ ಪ್ರಕೃತಿಯ ಮರೆದೇಳಿ.
ನಿಮ್ಮ ಭಕ್ತಿಮುಕ್ತಿಯ ಅಂಗದ ಕೂಟವ ನೆನೆದೇಳಿ. ನಿಮ್ಮ ಗುರುವಾಜ್ಞೆಯ
ನಿಮ್ಮ ವಿರಕ್ತಿ ಅರಿವಿನ ಸಾವಧಾನವನರಿದೇಳಿ. ಸಾರಿದೆ, ಎವೆ ಹಳಚಿದಡಿಲ್ಲ,
ಶುದ್ಧ ಸಿದ್ಧ ಪ್ರಸಿದ್ಧ ಪ್ರಸನ್ನ ಕುರಂಗೇಶ್ವರಲಿಂಗವ ಕೂಡಬಲ್ಲಡೆ.**

## ಅರಿವಿನಕ್ಷರದಾರತಿ

**"ಜಾಗ್ರದಲ್ಲಿ ನಿಮ್ಮ ದೇವರಿಗೆ ಸಲ್ಲದುದ ಮನ ನೆನೆಯದಿರಿ,
ಕಂಗಳು ತುಂಬಿ ಆಹುದೆಂದು ಒಂದ ನೋಡದಿರಿ,
ಅದು ಜಾಗ್ರದ ಬಯಕೆ, ಸ್ವಪ್ನದ ಕೂಟ,
ನಿಜದ ಎಚ್ಚರಿಕೆ."**



# ಅರಿವಿನ ಶರಣ ಅಗ್ಘವಣಿಯ ಹಂಪಯ್ಯ





## ಸಂಕ್ಷಿಪ್ತ ಪರಿಚಯ

### ಹಂಪಯ್ಯ

ಊರು–ಮುಕುಂದಪುರ, ಕುಂತಳದೇಶ ಕಾಯಕ–ಭಕ್ತರ ಮನೆಗೆ ನೀರು, ಹೂ, ಪತ್ರೆ ಸರಬರಾಜು ಮಾಡುವುದು–ಹೂಗಾರ
ಕಾರ್ಯಕ್ಷೇತ್ರ–ಕಲ್ಯಾಣ, ಬೀದರ ಜಿಲ್ಲೆ. ದೊರೆತ ವಚನಗಳು–೦೪ ವಚನಾಂಕಿತ–ಹಂಪೆಯ ವಿರುಪಯ್ಯ

## ವಚನ

**ಹುಸಿಯ ನುಡಿಯನು ಭಕ್ತ, ವ್ಯಸನಕ್ಕೆಳಸನು ಭಕ್ತ, ವಿಷಯಂಗಳಾತಂಗೆ ತೃಣವು ನೋಡಾ,**
**ಬಯಸುವವನಲ್ಲ ಭಕ್ತ. ದಯೆಯೆಂಬುದು ತನ್ನ ಕೈಯಲ್ಲಿ, ಸ್ಮರಣೆಯೆಂಬುದು ತನಗೆ ತೊತ್ತಾಗಿಪ್ಪುದು.**
**ಕೋಪವೆಂಥದೆಂದರಿಯ, ತಾಪತ್ರಯಂಗಳು ಮುಟ್ಟಲಮ್ಮವು, ವ್ಯಾಕ್ತಿಗಳಡಗಿದವು.**
**ಲಿಂಗವನೊಳಕೊಂಡ ಪರಿಣಾಮ. ಆತನ ಪಥ ಲೋಕಕ್ಕೆ ಹೊಸತು, ಲೋಕದ ಪಥವಾತನಿಗೆ**
**ಹೊಸತು. ತನಗೊಮ್ಮೆಯೂ ಲಿಂಗಧ್ಯಾನ, ಲಿಂಗಕ್ಕೊಮ್ಮೆಯ ತನ್ನಧ್ಯಾನ. ಘನ ಘನ ಮಹಿಮೆಯ**
**ಹೊಗಳಲೆನ್ನಳವಲ್ಲ. ಪನ್ನಗಧರ ಕೇಳಯ್ಯಾ, ಚೆನ್ನ ಹಂಪೆಯ ವಿರುಪಯ್ಯ,**
**ನಿಮ್ಮನಂಬಿದ ಸತ್ಯ ಶರಣ ಪರಿಣಾಮ.**




**ಅರಿವಿನಕ್ಷರದಾರತಿ**

"ಜಗವರಿಯೆ ಶಿವಾಚಾರದ ಧ್ವಜವನೆತ್ತಿಸಿದವ
ಬಸವಣ್ಣನು"



# ವೀರಗಣಾಚಾರಿ ಮಡಿವಾಳ ಮಾಚಿದೇವರು




## ಸಂಕ್ಷಿಪ್ತ ಪರಿಚಯ

### ಮಾಚಯ್ಯ-ಮಾಚಿದೇವ-ಮಾಚಿದೇವರು

ತಾಯಿ–ಸುಜ್ಞಾನಾಂಬಿಕೆ, ತಂದೆ–ಪರ್ವತಯ್ಯ, ಊರು–ದೇವರಹಿಪ್ಪರಿಗೆ, ವಿಜಯಪುರ ಜಿಲ್ಲೆ
ಕಾಯಕ–ಶರಣರ ಬಟ್ಟೆ ಮಡಿ ಮಾಡುವುದು, ಕಾರ್ಯಕ್ಷೇತ್ರ–ದೇವರಹಿಪ್ಪರಿಗೆ –ಕಲ್ಯಾಣ, ಬೀದರ ಜಿಲ್ಲೆ,
ದೊರೆತ ವಚನಗಳು–೩೫೪, ವಚನಾಂಕಿತ–ಕಲಿದೇವರ ದೇವ,
ಲಿಂಗೈಕ್ಯ/ಸಮಾಧಿ ಸ್ಥಳ–ದೇವರ ಹಿಪ್ಪರಿಗೆ–ಕಾರಿಮನೆ, ಪೂರ್ವಾಶ್ರಮ–ಮಡಿವಾಳರು (ಅಗಸರು)

### ವಚನ

ಎರಡು ಕೋಟಿ ವೀರಗಣಂಗಳಾಗಬಹುದಲ್ಲದೆ ಹರಳಯ್ಯ ಮಧುವಯ್ಯಗಳಾಗಬಾರದಯ್ಯಾ.
ಗಂಗೆವಾಳು ಕಸಮಾರುದ್ರರಾಗಬಹುದಲ್ಲದೆ ಜಗದೇವ ಮೊಲ್ಲೆ ಬೊಮ್ಮಣ್ಣಗಳಾಗಬಾರದಯ್ಯಾ.
ಕಲಿದೇವರದೇವಾ, ನಾನು ನೀನಾಗಬಹುದಲ್ಲದೆ ಭಕ್ತಿಗೆ ಬಸವಣ್ಣ ನಲ್ಲದಾಗಬಾರದೆಂದರಿದು,
ಆ ಬಸವಣ್ಣನ ಶ್ರೀಪಾದಕ್ಕೆ ನಮೋ ನಮೋ ಎನುತಿರ್ದೆನು.

### ಅರಿವಿನಕ್ಷರದಾರತಿ




"ಸುಖವೊಂದು ಕೋಟಿ ಬಂದಲ್ಲಿ ಬಸವಣ್ಣನ
ನೆನೆವುದು, ದುಃಖವೊಂದು ಕೋಟಿ ಬಂದಲ್ಲಿ
ಬಸವಣ್ಣನ ನೆನೆವುದು."



# ವಿಶ್ವಗುರು ಬಸವಣ್ಣನವರು




## ಸಂಕ್ಷಿಪ್ತ ಪರಿಚಯ

**ಬಸವ-ಬಸವರಸ-ಬಸವರಾಜ-ಬಸವಣ್ಣ-ಸಂಗನಬಸವಣ್ಣ-ಬಸವೇಶ್ವರ**


ತಾಯಿ–ಮಾದಲಾಂಬಿಕೆ. ತಂದೆ–ಮಾದರಸ. ಸತಿ–ಗಂಗಾಂಬಿಕೆ ಮತ್ತು ನೀಲಾಂಬಿಕೆ.
ಊರು–ಇಂಗಳೇಶ್ವರ ಬಾಗೇವಾಡಿ, ವಿಜಯಪುರ ಜಿಲ್ಲೆ.
ಕಾಯಕ–ಪ್ರಧಾನಮಂತ್ರಿ–ಶಿವಯೋಗ ಜೀವನ ಬೋಧನೆ. ಕಾರ್ಯಕ್ಷೇತ್ರ–ಕೂಡಲಸಂಗಮ– ಮಂಗಳವವೇಢೆ–ಕಲ್ಯಾಣ.
ದೊರೆತ ವಚನಗಳು–೧೪೦೬. ವಚನಾಂಕಿತ–ಕೂಡಲಸಂಗಮದೇವ.
ಲಿಂಗೈಕ್ಯ–ಕೂಡಲಸಂಗಮ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ. ಪೂರ್ವಾಶ್ರಮ–ಆಗಮಿಕ ಶೈವಬ್ರಾಹ್ಮಣ.

## ವಚನ

**ಕಳಬೇಡ, ಕೊಲಬೇಡ, ಹುಸಿಯ ನುಡಿಯಲು ಬೇಡ, ಮುನಿಯಬೇಡ,**
**ಅನ್ಯರಿಗೆ ಅಸಹ್ಯ ಪಡಬೇಡ, ತನ್ನ ಬಣ್ಣಿಸಬೇಡ, ಇದಿರು ಹಳಿಯಲುಬೇಡ.**
**ಇದೇ ಅಂತರಂಗ ಶುದ್ಧಿ, ಇದೇ ಬಹಿರಂಗ ಶುದ್ಧಿ, ಇದೇ ನಮ್ಮ**
**ಕೂಡಲ ಸಂಗಮದೇವರನೊಲಿಸುವ ಪರಿ.**

ಅರಿವಿನಕ್ಷರದಾರತಿ

"ಬಾಗಿದ ತಲೆ ಮುಗಿದ ಕೈಯಾಗಿರಿಸು
ಕೂಡಲಸಂಗಮದೇವ"






# ಪರಮ ಸುಖಿ ಶರಣ ಉಳಿಯುಮೇಶ್ವರ ಚಿಕ್ಕಣ್ಣ



## ಸಂಕ್ಷಿಪ್ತ ಪರಿಚಯ

**ಚಿಕ್ಕಣ್ಣ-ಚಿಕ್ಕಯ್ಯ**

ಊರು–ದೇವರಗುಡಿ, ರಾಯಚೂರು ಜಿಲ್ಲೆ, ಸಿಂಧನೂರು ತಾಲ್ಲೂಕು.
ಕಾಯಕ–ಶಿವಯೋಗ ಜೀವನ ಬೋಧನೆ. ಕಾರ್ಯಕ್ಷೇತ್ರ–ಕಲ್ಯಾಣ, ಬೀದರ ಜಿಲ್ಲೆ
ದೊರೆತ ವಚನಗಳು–೧೨ ವಚನಾಂಕಿತ–ಉಳಿಯುಮೇಶ್ವರಾ
ಪೂರ್ವಾಶ್ರಮ–ಕಾಳಾಮುಖ ಆಚಾರ್ಯ

## ವಚನ

ವಾರಣಾಸಿ, ಅವಿಮುಕ್ತಿ ಇಲ್ಲಿಯೇ ಇದ್ದಾನೆ. ಹಿಮದ ಕೇದಾರ, ವಿರೂಪಾಕ್ಷ ಇಲ್ಲಿಯೇ ಇದ್ದಾನೆ.
ಗೋಕರ್ಣ, ಸೇತುರಾಮೇಶ್ವರ ಇಲ್ಲಿಯೇ ಇದ್ದಾನೆ. ಶ್ರೀಶೈಲ ಮಲ್ಲಿನಾಥ ಇಲ್ಲಿಯೇ ಇದ್ದಾನೆ.
ಸಕಲಲಿಂಗ ಉಳಿಯುಮೇಶ್ವರ ತನ್ನಲ್ಲಿ ಇದ್ದಾನೆ.

## ಅರಿವಿನಕ್ಷರದಾರತಿ



"ತೊರೆಯ ಉದಕವ ಕೊಂಡು, ತರಿದ ಸೊಪ್ಪನೆ
ಮೆದ್ದು, ಇರವು ಲಿಂಗ ಗೂಡಾಗಿ ಇರಬೇಕು."



# ವೀರಮಾತೆ ನಾಗಲಾಂಬಿಕೆ



## ಸಂಕ್ಷಿಪ್ತ ಪರಿಚಯ

### ನಾಗಮ್ಮ-ನಾಗಲಾಂಬಿಕೆ-ಅಕ್ಕನಾಗಮ್ಮ-ಅಕ್ಕನಾಗಲಾಂಬಿಕೆ

ತಾಯಿ–ಮಾದಲಾಂಬಿಕೆ. ತಂದೆ–ಮಾದರಸ. ಪತಿ–ಶಿವದೇವ(ಶಿವಸ್ವಾಮಿ)
ಊರು–ಇಂಗಳೇಶ್ವರ ಬಾಗೇವಾಡಿ, ವಿಜಯಪುರ ಜಿಲ್ಲೆ.
ಕಾಯಕ–ಮಹಾಮನೆಯ ಮೇಲ್ವಿಚಾರಣೆ. ಕಾರ್ಯಕ್ಷೇತ್ರ–ಕೂಡಲಸಂಗಮ–ಮಂಗಳವೇಢೆ–ಕಲ್ಯಾಣ– ಉಳವಿ.
ದೊರೆತ ವಚನಗಳು–೧೫. ವಚನಾಂಕಿತ–ಬಸವಣ್ಣಪ್ರಿಯ ಚೆನ್ನಸಂಗಯ್ಯ
ಲಿಂಗೈಕ್ಯ/ಸಮಾಧಿ ಸ್ಥಳ–ಎಣ್ಣೆಹೊಳೆ ತೀರದ ತರಿಕೆರೆ, ಶಿವಮೊಗ್ಗ ಜಿಲ್ಲೆ. ಪೂರ್ವಾಶ್ರಮ–ಆಗಮಿಕ ಶೈವ ಬ್ರಾಹ್ಮಣ

## ವಚನ

ಮನದೊಡೆಯ ಮಹಾದೇವ ಮನವ ನೋಡಿಹೆನೆಂದು ಮನುಜರ ಕೈಯಿಂದ ಒಂದೊಂದ ನುಡಿಸುವನು.
ಇದಕ್ಕೆ ಕಳವಳಿಸದಿರು ಮನವೆ, ಕಾತರಿಸದಿರು ತನುವೆ ನಿಜವ ಮರೆಯದಿರು ಕಂಡಾ, ನಿಶ್ಚಿಂತನಾಗಿರು
ಮನವೆ. ಬಸವಣ್ಣಪ್ರಿಯ ಚೆನ್ನಸಂಗಯ್ಯನು ಬೆಟ್ಟದನಿತಪರಾಧವನು ಒಂದು ಬೊಟ್ಟಿನಲ್ಲಿ ತೊಡೆವನು.




ಅರಿವಿನಕ್ಷರದಾರತಿ

"ಬಸವಣ್ಣಾ, ನೀವು ಮರ್ತ್ಯಕ್ಕೆ ಬಂದು
ನಿಂದಲ್ಲಿ ಭಕ್ತಿಯ ಬೆಳವಿಗೆ ದೆಸೆದೆಸೆಗೆ
ಪಸರಿಸಿತಲ್ಲಾ!"



# ಆಚಾರದ ಶರಣೆ ಅಕ್ಕಮ್ಮ




## ಸಂಕ್ಷಿಪ್ತ ಪರಿಚಯ

### ಅಕ್ಕಮ್ಮ-ರೆಮ್ಮವ್ವ

ಊರು–ಏಲೇಶ್ವರ (ಏಲೇರಿ), ಯಾದಗಿರಿ ಜಿಲ್ಲೆ, ಕಾಯಕ–ಗೃಹಿಣಿ
ಕಾರ್ಯಕ್ಷೇತ್ರ–ಕಲ್ಯಾಣ, ಬೀದರ ಜಿಲ್ಲೆ, ದೊರೆತ ವಚನಗಳು–೧೫೪
ವಚನಾಂಕಿತ–ಆಚಾರವೇ ಪ್ರಾಣವಾದ ರಾಮೇಶ್ವರಲಿಂಗ
ಲಿಂಗೈಕ್ಯ–ವರಕೋಡು ಹತ್ತಿರ ಕೋಟಿಕಾನು, ಹೊಸನಗರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
ಪೂರ್ವಾಶ್ರಮ–ಈಡಿಗರು (ದೀವರ ಉಪಜಾತಿ)

## ವಚನ

ಭಕ್ತರ ಮನೆಗೆ ಸತ್ಯ ಶರಣರು ಬಂದಲ್ಲಿಯೆ ಮದುವೆಯ ಉತ್ಸಾಹಕ್ಕಿಂತ ವೆಗ್ಗಳವೆಂದು ಕಂಡು, ತನು ಕರಗಿ, ಮನ ಬೆರೆಸಿ, ಕಂಗಳು ತುಂಬಿ ಪುಳಕಿತವಾಗಿ ವಂಚನೆ ಸಂಕಲ್ಪವೆಂಬ ಶಂಕೆದೋರದೆ, ನಿಶ್ಶಂಕನಾಗಿ ಮಾಡುವ ಭಕ್ತನ ವಂಕದ ಬಾಗಿಲೆ ಆಚಾರವೇ ಪ್ರಾಣವಾದ ರಾಮೇಶ್ವರಲಿಂಗದ ಮಸ್ತಕ.

## ಅರಿವಿನಕ್ಷರದಾರತಿ




"ಚಿನ್ನ ಒಡೆದಡೆ, ಕರಗಿದಡೆ ರೂಪಪ್ಪುದಲ್ಲದೆ, ಮುತ್ತು ಒಡೆದು
ಕರಗಿದಡೆ ರೂಪಪ್ಪುದೆ? ಮರ್ತ್ಯದ ಮನುಜ ತಪ್ಪಿದರೊಪ್ಪ
ಬೇಕಲ್ಲದೆ, ಸದ್ಭಕ್ತ ಸದ್ಭಾವ ತಪ್ಪಿದಡೆ
ಒಪ್ಪಿಸಬಹುದೆ?"



# ಅನ್ಯವನರಿಯದ ಶರಣ ಕಿನ್ನರಿ ಬ್ರಹ್ಮಯ್ಯ



## ಸಂಕ್ಷಿಪ್ತ ಪರಿಚಯ

### ಬ್ರಹ್ಮಯ್ಯ

ತಾಯಿ–ಕಲಿದೇವಿ ಊರು–ಪೂದೂರು (ಉಡೂರು) ಆಂಧ್ರಪ್ರದೇಶ ರಾಜ್ಯ
ಕಾಯಕ–ಅಕ್ಕಸಾಲಿಗ, ಕಿನ್ನರಿ ನುಡಿಸುವುದು, ಜಾನಪದ ಕಲಾವಿದ ಕಾರ್ಯಕ್ಷೇತ್ರ–ಕಲ್ಯಾಣ ಬೀದರಜಿಲ್ಲೆ.
ದೊರೆತ ವಚನಗಳು–೧೮ ವಚನಾಂಕಿತ–ಮಹಾಲಿಂಗ ತ್ರಿಪುರಾಂತಕ
ಲಿಂಗೈಕ್ಯ/ಸಮಾಧಿ ಸ್ಥಳ–ಉಳವಿ ಮಹಾಮನೆ ಹತ್ತಿರ, ಉತ್ತರ ಕನ್ನಡ ಜಿಲ್ಲೆ. ಪೂರ್ವಾಶ್ರಮ–ಅಕ್ಕಸಾಲಿಗ

## ವಚನ

ಹುಸಿಯೆಂಬ ಅಲಗಿಂಗೆ ಒಡಲೆ ಗುರಿಯಾಯಿತ್ತು ವಿಷವೆಂಬ ಅಗ್ನಿಗೆ ತನುವೆ ಬಿಂಧ್ಯವಾಯಿತು.
ಏನೆಂಬೆನೇನೆಂಬೆ ವಿಧಿ ಮಾಡಿತ್ತ. ಶಮೆದ ಮಾದಿಗಳು ನೆಲೆಗೊಳ್ಳದೆ ಹೋದವು.
ಮಹಾಲಿಂಗ ತ್ರಿಪುರಾಂತಕನ ಶರಣರೆ ಎನ್ನೊಡೆಯರೆಂದರಿಯದೆ ಇದ್ದ ಕಾರಣ
ತೆರಹು ಮರಹಿನಲ್ಲಿ ತಾವೆಡೆಗೊಂಡವು.




**ಅರಿವಿನಕ್ಷರದಾರತಿ**

"ತನು ಸೆಜ್ಜೆ ಮನ ಲಿಂಗವಾದ ಬಳಿಕ
ಆನು ಮತ್ತೆ ಬೇರೆ ಅರಸಲುಂಟೆ?"



# ವೈರಾಗ್ಯ ನಿಧಿ ಅಕ್ಕಮಹಾದೇವಿ



## ಸಂಕ್ಷಿಪ್ತ ಪರಿಚಯ

### ಮಹಾದೇವಿ-ಮಹಾದೇವಿಯಕ್ಕ-ಅಕ್ಕಮಹಾದೇವಿ

ತಾಯಿ–ಲಿಂಗಮ್ಮ, ತಂದೆ–ಓಂಕಾರ ಶೆಟ್ಟಿ, ಊರು–ಉಡುತಡಿ(ಉಡುಗಣಿ), ಶಿಕಾರಿಪುರ ತಾಲ್ಲೂಕು, ಶಿವಮೊಗ್ಗ ಜಿಲ್ಲೆ.
ಕಾಯಕ–ಶಿವಯೋಗ ಜೀವನ ಬೋಧನೆ,
ಕಾರ್ಯಕ್ಷೇತ್ರ–ಉಡುತಡಿ–ಕಲ್ಯಾಣ–ಶ್ರೀಶೈಲ, ಕರ್ನೂಲ ತಾಲ್ಲೂಕು, ತೆಲಂಗಾಣ ರಾಜ್ಯ,
ದೊರೆತ ವಚನಗಳು–೪೩೪, ವಚನಾಂಕಿತ–ಚೆನ್ನಮಲ್ಲಿಕಾರ್ಜುನ,
ಲಿಂಗೈಕ್ಯ/ಸಮಾಧಿ ಸ್ಥಳ–ಕದಳಿ (ಶ್ರೀಶೈಲ), ಕರ್ನೂಲ ಜಿಲ್ಲೆ, ತೆಲಂಗಾಣ ರಾಜ್ಯ, ಪೂರ್ವಾಶ್ರಮ–ಶೆಟ್ಟರು

## ವಚನ

ಕಲ್ಯಾಣವೆಂಬುದಿನ್ನಾರಿಗೆ ಹೋಗಬಹುದು! ಹೋಗಬಾರದು, ಅಸಾಧ್ಯವಯ್ಯಾ. ಆಸೆ ಆಮಿಷ ಅಳಿದಂಗಲ್ಲದೆ ಕಲ್ಯಾಣದತ್ತಲಡಿಯಿಡಬಾರದು. ಒಳ ಹೊರಗು ಶುದ್ಧನಾದಂಗಲ್ಲದೆ ಕಲ್ಯಾಣವ ಹೊಗಬಾರದು ನೀನಾನೆಂಬುದ ಹರಿದಂಗಲ್ಲದೆ ಕಲ್ಯಾಣದ ಒಳಗು ತಿಳಿಯಬಾರದು ಚೆನ್ನಮಲ್ಲಿಕಾರ್ಜುನಂಗೊಲಿದು ಉಭಯ ಲಜ್ಜೆ ಅಳಿದೆನಾಗಿ, ಕಲ್ಯಾಣವಂ ಕಂಡು ನಮೋ ನಮೋ ಎನುತ್ತಿದ್ದೆನು.


ಅರಿವಿನಕ್ಷರದಾರತಿ

"ಅಯ್ಯಾ ನಿಮ್ಮ ಶರಣರ ಬರವಿಂಗೆ ಗುಡಿ
ತೋರಣವ ಕಟ್ಟುವೆ"






# ಲಿಂಗಪ್ರಿಯ ಶರಣ ಅಮುಗಿ ದೇವಯ್ಯ



## ಸಂಕ್ಷಿಪ್ತ ಪರಿಚಯ

### ದೇವಯ್ಯ-ಅಮಾಕಸಿದ್ಧ

ಸತಿ–ರಾಯಮ್ಮ ಊರು–ಸೊನ್ನಲಿಗೆ(ಸೊಲ್ಲಾಪುರ) ಮಹಾರಾಷ್ಟ್ರ ರಾಜ್ಯ
ಕಾಯಕ–ನೇಯ್ಗೆ ಕಾರ್ಯಕ್ಷೇತ್ರ–ಸೊನ್ನಲಿಗೆ–ಕಲ್ಯಾಣ. ಬೀದರ ಜಿಲ್ಲೆ
ದೊರೆತ ವಚನಗಳು–೩೦ ವಚನಾಂಕಿತ–ಸಿದ್ಧ ಸೋಮನಾಥ
ಲಿಂಗೈಕ್ಯ/ಸಮಾಧಿ ಸ್ಥಳ–ಹೂಳಜೆ(ಮಳಜಿ) ಮಹಾರಾಷ್ಟ್ರ ರಾಜ್ಯ ಪೂರ್ವಾಶ್ರಮ–ಕುರುಹಿನಶೆಟ್ಟಿ

## ವಚನ

**ಶಿವನ ನೆನೆದಡೆ ಭವ ಹಿಂಗುವುದೆಂಬ ವಿವರಗೇಡಿಗಳ ಮಾತಕೇಳಲಾಗದು,
ಹೇಳದಿರಯ್ಯ, ಜ್ಯೋತಿಯ ನೆನೆದಡೆ ಕತ್ತಲೆ ಕೆಡುವುದೇ? ಇಷ್ಟಾನ್ನವ ನೆನೆದಡೆ ಹೊಟ್ಟೆ ತುಂಬುವುದೆ?
ರಂಭೆಯ ನೆನೆದಡೆ ಕಾಮದ ಕಳವಳವಡಗುವುದೆ ಅಯ್ಯಾ ನೆನೆದರಾಗದು, ನಿಜದಲ್ಲಿ ನಿಧರಿಸಿ ತಾನು
ತಾನಾಗದಕ್ಕರ, ಸದ್ಗುರು ಸಿದ್ಧ ಸೋಮನಾಥ ಅಂಗನ ನೆನೆಯಬಾರದು.**

ಅರಿವಿನಕ್ಷರದಾರತಿ




"ಬಸವಣ್ಣಾ, ನೀವು ಮರ್ತ್ಯಕ್ಕೆ ಬಂದು ನಿಂದಲ್ಲಿ
ಭಕ್ತಿಯ ಬೆಳವಿಗೆ ದೆಸೆದೆಸೆಗೆ ಪಸರಿಸಿತಲ್ಲಾ!"



# ವ್ಯೋಮ ಮೂರ್ತಿ ಅಲ್ಲಮ ಪ್ರಭುದೇವರು




## ಸಂಕ್ಷಿಪ್ತ ಪರಿಚಯ

### ಅಲ್ಲಮ-ಅಲ್ಲಯ್ಯ-ಅಲ್ಲಮ ಪ್ರಭು- ಪ್ರಭುದೇವರು

ತಾಯಿ–ಸುಜ್ಞಾನಿ. ತಂದೆ–ನಿರಹಂಕಾರ. ಊರು–ಬಳ್ಳಿಗಾವಿ, ಶಿಕಾರಿಪುರ ತಾಲ್ಲೂಕು, ಶಿವಮೊಗ್ಗಜಿಲ್ಲೆ.
ಕಾಯಕ–ಮದ್ದಳೆ ಬಾರಿಸುವುದು–ಶಿವಯೋಗ ಜೀವನ ಬೋಧನೆ.
ಕಾರ್ಯಕ್ಷೇತ್ರ–ದೇಶ ಸಂಚಾರಿ–ಕಲ್ಯಾಣ, ಬೀದರಜಿಲ್ಲೆ. ದೊರೆತ ವಚನಗಳು–೧೬೪೫. ವಚನಾಂಕಿತ–ಗುಹೇಶ್ವರ
ಲಿಂಗೈಕ್ಯ/ಸಮಾಧಿಸ್ಥಳ–ಶ್ರೀಶೈಲ, ಕರ್ನೂಲ ಜಿಲ್ಲೆ, ತೆಲಂಗಾಣ ರಾಜ್ಯ. ಪೂರ್ವಾಶ್ರಮ–ನಟವರ

## ವಚನ

ಕೃತಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬಡಿದು ಬುದ್ಧಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ.
ತ್ರೇತಾಯುಗದಲ್ಲಿ ಶ್ರೀಗುರು ಶಿಷ್ಯಂಗೆ ಬೈದು ಬುದ್ಧಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ.
ದ್ವಾಪರದಲ್ಲಿ ಶ್ರೀಗುರು ಶಿಷ್ಯಂಗೆ ಝುಂಕಿಸಿ ಬುದ್ಧಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ. ಕಲಿಯುಗದಲ್ಲಿ ಶ್ರೀಗುರು ಶಿಷ್ಯಂಗೆ ವಂದಿಸಿ ಬುದ್ಧಿಯ ಕಲಿಸಿದಡೆ ಆಗಲಿ ಮಹಾಪ್ರಸಾದವೆಂದೆನಯ್ಯಾ.
ಗುಹೇಶ್ವರಾ ನಿಮ್ಮ ಕಾಲದ ಕಟ್ಟಳೆಯ ಕಲಿತನಕ್ಕೆ ನಾನು ಬೆರಗಾದೆನು.

**ಅರಿವಿನಕ್ಷರದಾರತಿ**




"ಗುಹೇಶ್ವರ, ನಿಮ್ಮ ಶರಣ ಸಂಗನ ಬಸವಣ್ಣನ
ಸಾನಿಧ್ಯದಿಂದಾನು ಸದ್ಭಕ್ತನಾದೆನಯ್ಯಾ"



# ಚೊಕ್ಕವಿಚಾರಗಳ ಶರಣ ಕಲಕೇತಯ್ಯ



## ಸಂಕ್ಷಿಪ್ತ ಪರಿಚಯ

### ಕಲಕೇತಯ್ಯ-ಬೊಮ್ಮಯ್ಯ

ಕಾಯಕ-ಕಲೆಗಾರ (ಕಳ್ಳಿಕೇತರಾಟ) ಜಾನಪದ ಕಲಾವಿದ ಕಾರ್ಯಕ್ಷೇತ್ರ-ದೇಶ ಸಂಚಾರಿ-ಕಲ್ಯಾಣ, ಬೀದರಜಿಲ್ಲೆ
ದೊರೆತ ವಚನಗಳು-೧೧ ವಚನಾಂಕಿತ-ಮೇಖಲೇಶ್ವರಲಿಂಗ ಪೂರ್ವಾಶ್ರಮ-ದಲಿತ ವರ್ಗ

## ವಚನ

**ನಾನು ನಿನಗೆ ತಂಗಿಯ ಕೊಟ್ಟು ನೀನೆನಗೆ ಮೈದುನನಾದೆ. ನಾನು ನಿನಗೆ ಅಕ್ಕನ ಕೊಟ್ಟು ನೀನೆನಗೆ ಭಾವನಾದೆ. ನಾನು ನೀನೂ ಏನಹರೆಂಬುದ ತಿಳಿದು ಅಣ್ಣನಿಗೆ ತಂಗಿ, ಅಕ್ಕನಿಗೆ ತಮ್ಮ ಇವರಿಬ್ಬರೂ ದೃಷ್ಟದಲ್ಲಿ ಒಡಹುಟ್ಟಿದರಾದ ಮತ್ತೆ ತಂಗಿಯ ಮಗಳು ಸೊಸೆಯಾಗಿ, ಅಕ್ಕನ ಮಗ ಅಳಿಯನಾದ ಚಿತ್ರವ ನೋಡಾ! ಒಂದು ಯೋನಿಯಲ್ಲಿ ಬಂದುದನರಿಯದೆ, ನಿನ್ನ ಒಡಹುಟ್ಟಿದ (ವ)ಳಿಗೆ ನೀ ಗಂಡನಾಗಿ, ಎನಗೆ ನೀ ಭಾವನಾದ ಪರಿಯ ನೋಡಿ ನಾಚಿಸಬಂದೆ. ಕಲಕೇತನಲ್ಲಿ ಕೊಳುಕೊಡೆ ಬೇಡ ಮೇಖಲೇಶ್ವರಲಿಂಗದ ಹೊಲಬ ತಿಳಿಯಬಲ್ಲಡೆ.**

## ಅರಿವಿನಕ್ಷರದಾರತಿ

"ಪ್ರಥಮದಲ್ಲಿ ರುದ್ರತತ್ವ ; ಅದು ಘಟಿಸಿದಲ್ಲಿ
ಈಶ್ವರತತ್ವ.ಈ ಎರಡೂ ಕೂಡಿದಲ್ಲಿ ಸದಾಶಿವ ತತ್ವ
ಇಂತೀ ತ್ರಿವಿಧ ಲೀಲೆ ಏಕಾರ್ಥವಾದಲ್ಲಿ ಪರಶಿವ
ತತ್ವದ ಪರಮ ಪ್ರಕಾಶ"






# ಚಿನ್ಮಯ ಜ್ಞಾನಿ ಚೆನ್ನಬಸವಣ್ಣ




## ಸಂಕ್ಷಿಪ್ತ ಪರಿಚಯ

### ಚೆನ್ನಬಸವಣ್ಣ-ಚೆನ್ನಬಸವ

ತಾಯಿ–ನಾಗಲಾಂಬಿಕೆ (ಅಕ್ಕನಾಗಮ್ಮ), ತಂದೆ–ಶಿವದೇವ (ಶಿವಸ್ವಾಮಿ),
ಊರು–ಕಪ್ಪಡಿ ಸಂಗಮ, ಹುನಗುಂದ ತಾಲ್ಲೂಕು, ಬಾಗಲಕೋಟೆ ಜಿಲ್ಲೆ. ಕಾಯಕ–ಅನುಭಾವಿಗಳು ಬರೆದ ವಚನಗಳ ಪರಾಮರ್ಶೆ–ಶಿವಯೋಗ ಜೀವನ–ಬೋಧನೆ, ಕಾರ್ಯಕ್ಷೇತ್ರ–ಕಲ್ಯಾಣ, ಬೀದರ ಜಿಲ್ಲೆ, ಉಳವಿ, ಉತ್ತರಕನ್ನಡ ಜಿಲ್ಲೆ.
ದೊರೆತ ವಚನಗಳು–೧೭೭೩, ವಚನಾಂಕಿತ–ಕೂಡಲ ಚೆನ್ನಸಂಗಮದೇವ
ಲಿಂಗೈಕ್ಯ/ಸಮಾಧಿ ಸ್ಥಳ–ಉಳವಿ, ಜೊಯಿಡಾ ತಾಲ್ಲೂಕು, ಉತ್ತರ ಕನ್ನಡ ಜಿಲ್ಲೆ.

## ವಚನ

ಗುರುಶಿಷ್ಯ ಸಂಬಂಧವನೇನೆಂದು ಪಮಿಸುವೆ? ಜ್ಯೋತಿಯಲೊಡಗಿದ ಜ್ಯೋತಿಯಂತಿರಬೇಕು.
ದರ್ಪಣದೊಳಡಗಿದ ಪ್ರತಿಬಿಂಬದಂತಿರಬೇಕು. ಸ್ಫಟಿಕದೊಳಗಿರಿಸಿದ ರತ್ನದಂತಿರಬೇಕು.
ರೂಪಿನ ನೆಳಲಿನ ಅಂತರಂಗದಂತಿರಬೇಕು.ಇದು ಕಾರಣ, ಕೂಡಲ ಚೆನ್ನಸಂಗಯ್ಯ
ದರ್ಪಣವ ದರ್ಪಣಕ್ಕೆ ತೋರಿದಂತಿರಬೇಕು.




**ಅರಿವಿನಕ್ಷರದಾರತಿ**

"ಬಸವನೆ ಬಿಲ್ಲಾಳಾಗಿ ಹೊಸಭಕ್ತಿ ಅಂಬಾಗಿ,
ಎಸೆದನಯ್ಯಾ ಆ ಲಿಂಗವನು ಗುರಿಮಾಡಿ."



# ನಂಬಿಗೆಯ ದಡ ದಾಂಟಿಸುವ ಶರಣ ಅಂಬಿಗರ ಚೌಡಯ್ಯ




### ಸಂಕ್ಷಿಪ್ತ ಪರಿಚಯ

## ಚೌಡಯ್ಯ

ತಾಯಿ–ಗಂಗೆ ಊರು–ಚೌಡದಾನಾಪುರ, ಕಲಬುರಗಿ ಜಿಲ್ಲೆ ಕಾಯಕ–ದೋಣಿ ನಡೆಸುವುದು
ಕಾರ್ಯಕ್ಷೇತ್ರ–ತ್ರಿಪುರಾಂತ ಕೆರೆ, ಕಲ್ಯಾಣ, ಬೀದರ ಜಿಲ್ಲೆ ದೊರೆತ ವಚನಗಳು–೨೭೮
ವಚನಾಂಕಿತ–ಅಂಬಿಗರ ಚೌಡಯ್ಯ ಲಿಂಗೈಕ್ಯ/ಸಮಾಧಿಸ್ಥಳ–ಚೌಡಯ್ಯ ದಾನಪುರ, ಹಾವೇರಿ ಜಿಲ್ಲೆ
ಪೂರ್ವಾಶ್ರಮ–ಗಂಗಾಮತ (ಕಬ್ಬಲಿಗ, ಅಂಬಿಗ)

### ವಚನ

ಬಡತನಕ್ಕೆ ಉಂಬುವ ಚಿಂತೆ, ಉಣಲಾದರೆ ಉಡುವ ಚಿಂತೆ, ಉಡಲಾದರೆ ಇಡುವ ಚಿಂತೆ,
ಇಡಲಾದರೆ ಹೆಂಡಿರ ಚಿಂತೆ, ಹೆಂಡಿರಾದರೆ ಮಕ್ಕಳ ಚಿಂತೆ, ಮಕ್ಕಳಾದರೆ ಬದುಕಿನ ಚಿಂತೆ,
ಬದುಕಾದರೆ ಕೇಡಿನ ಚಿಂತೆ, ಕೇಡಾದರೆ ಮರಣದ ಚಿಂತೆ, ಇಂತೀ ಹಲವು ಚಿಂತೆಯಲ್ಲಿ ಇಪ್ಪವರ ಕಂಡೆನು.
ಶಿವನ ಚಿಂತೆಯಲ್ಲಿದ್ದವರೊಬ್ಬರೂ ಕಾಣೆನೆಂದಾತ ನಮ್ಮ ಅಂಬಿಗರ ಚೌಡಯ್ಯ (ನಿಜ) ಶರಣನು.

ಅರಿವಿನಕ್ಷರವಾರತಿ




"ಅಂಬಿಗ ಅಂಬಿಗ ಎಂದು ಕುಂದ ನುಡಿಯದಿರು,
ನಂಬಿದರೆ ಒಂದೆ ಹುಟ್ಟಲಿ ಕಡೆಯ
ಹಾಯಿಸುವನಂಬಿಗರ ಚೌಡಯ್ಯ."



# ಮಣ್ಣಿಗೆ ಕಣ್ಣನಿತ್ತ ಅನ್ನದಾತ ಶರಣ ಒಕ್ಕಲಿಗ ಮುದ್ದಣ್ಣ



## ಸಂಕ್ಷಿಪ್ತ ಪರಿಚಯ

### ಮುದ್ದಣ್ಣ-ಮುದ್ದಯ್ಯ

ಊರು–ಚೋಳದ ಹಾಳ, ಮಂಡ್ಯ ಜಿಲ್ಲೆ ಕಾಯಕ–ವ್ಯವಸಾಯ
ಕಾರ್ಯಕ್ಷೇತ್ರ–ಕಲ್ಯಾಣ, ಬೀದರಜಿಲ್ಲೆ ದೊರೆತ ವಚನಗಳು–೭೨ ವಚನಾಂಕಿತ–ಕಾಮಭೀಮ ಜೀವಧನದೊಡೆಯ
ಲಿಂಗೈಕ್ಯ/ಸಮಾಧಿಸ್ಥಳ–ನಾರಾಯಣಪುರ, ಬೀದರ ಜಿಲ್ಲೆ ಪೂರ್ವಾಶ್ರಮ–ಒಕ್ಕಲಿಗ

## ವಚನ

**ವೇದಶಾಸ್ತ್ರವನೋದುವುದಕ್ಕೆ ಹಾರುವನಲ್ಲ. ಇರಿದು ಮೆರೆವುದಕ್ಕೆ ಕ್ಷತ್ರಿಯನಲ್ಲ.
ವ್ಯವಹರಿಸುವುದಕ್ಕೆ ವೈಶ್ಯನಲ್ಲ. ಉಳುವ ಒಕ್ಕಲಮಗನ ತಪ್ಪ ನೋಡದೆ ಒಪ್ಪುಗೊಳ್ಳಯ್ಯಾ,
ಕಾಮಭೀಮ ಜೀವಧನದೊಡೆಯ ನೀನೆ ಬಲ್ಲೆ.**


## ಅರಿವಿನಕ್ಷರದಾರತಿ

**"ಕುಂಭದ ಮಳೆ ಹೊಯ್ಯಿತ್ತು. ಮೂರಂಗದ ನೇಗಿಲ
ತರಿಯಬೇಕು.ಆರಂಗದ ಭೂಮಿಯಲ್ಲಿ ಅರಸನಾಗಿ ಒಂದೆ ಮರ
ಹುಟ್ಟಿತ್ತು ಹುಟ್ಟುವಾಗ ಮರ ಮೂರು ಕವೆ, ಅಲ್ಲಿಂದತ್ತಾರು
ಕವೆಯಾಯಿತ್ತು."**

ಓಂ



# ನಿರಾಯಸದ ಶರಣ ಅವಸರದ ರೇಕಣ್ಣ



## ಸಂಕ್ಷಿಪ್ತ ಪರಿಚಯ

### ರೇಕಣ್ಣ

ಊರು-ಕಲ್ಯಾಣ, ಬೀದರ ಜಿಲ್ಲೆ ಕಾಯಕ-ತಳವಾರ-ಪತ್ರವ್ಯವಹಾರ- ಬಸವಣ್ಣನವರಿಗೆ ಕಾರ್ಯಕ್ರಮಗಳ ವೇಳೆ ತಿಳಿಸುವುದು. ಕಾರ್ಯಕ್ಷೇತ್ರ-ಕಲ್ಯಾಣ, ಬೀದರ ಜಿಲ್ಲೆ ದೊರೆತ ವಚನಗಳು-೧೦೫ ವಚನಾಂಕಿತ-ಸದ್ಯೋಜಾತಲಿಂಗ

## ವಚನ

ಮರನನೇರದೆ ಹಣ್ಣ ಕೊಯ್ಯಬಹುದೆ? ಕುಸುಮವಿಲ್ಲದೆ ಗಂಧವ ಮುಡಿಯಬಹುದೆ?
ಉಪದೃಷ್ಟವಿಲ್ಲದೆ ನಿಜದೃಷ್ಟವ ಕಾಣಬಹುದೆ? ಶ್ರೀಶ್ರದ್ಧೆಯಿಲ್ಲದೆ ತ್ರಿವಿಧಕರ್ತೃ ತನಗೆ ಸಾಧ್ಯವಪ್ಪುದೆ?
ಇದು ಕಾರಣ, ಗುರುವಿನಲ್ಲಿ ಸದ್ಭಾವ, ಲಿಂಗದಲ್ಲಿ ಮೂರ್ತಿಧ್ಯಾನ, ಜಂಗಮದಲ್ಲಿ
ತ್ರಿವಿಧಮಲದೂರಸ್ಥನಾಗಿಪ್ಪುದು, ಸದ್ಭಕ್ತಸಂಗ, ಚಿದ್ಘನವಸ್ತುವಿನ ಸಂಗ, ಸದ್ಯೋಜಾತಲಿಂಗಕ್ಕೆ ಸುಸಂಗ.

## ಅರಿವಿನಕ್ಷರದಾರತಿ

"ದಾರಿಯಲ್ಲಿ ಬೀದಿಯಲ್ಲಿ ಮನೆಗಳಲ್ಲಿ
ಹೊನ್ನು ಹೆಣ್ಣು ಮಣ್ಣಿನ ಮೇಲಣ ಕಾಮವಿಕಾರ ತೋರಿದಡೆ
ಅದಕ್ಕೇನೂ ಶಂಕೆಯಿಲ್ಲ, ಚಿತ್ರದ ಹುಲಿ, ಕನಸಿನ ಹಾವು,
ಜಲಮಂಡೂಕ ಕಚ್ಚಿ ಸತ್ತವರುಂಟೆ?"






# ಶಿವಯೋಗಿ ಸಿದ್ಧರಾಮೇಶ್ವರ



## ಸಂಕ್ಷಿಪ್ತ ಪರಿಚಯ

### ಧೂಳಿಮಾಕಾಳ-ಸಿದ್ಧರಾಮ-ಸಿದ್ಧರಾಮೇಶ್ವರ

ತಾಯಿ–ಸುಗ್ಗವ್ವೆ, ತಂದೆ–ಮುದ್ದುಗೌಡ, ಊರು–ಸೊನ್ನಲಿಗೆ (ಸೊಲ್ಲಾಪುರ), ಮಹಾರಾಷ್ಟ್ರ ರಾಜ್ಯ
ಕಾಯಕ–ಕೆರೆಕಟ್ಟೆ ಕಟ್ಟಿಸುವುದು–ಶಿವಯೋಗ ಜೀವನ ಬೋಧನೆ, ಕಾರ್ಯಕ್ಷೇತ್ರ–ಸೊನ್ನಲಿಗೆ–ಕಲ್ಯಾಣ, ಬೀದರಜಿಲ್ಲೆ
ದೊರೆತ ವಚನಗಳು–೧೧೬೨, ವಚನಾಂಕಿತ–ಕಪಿಲಸಿದ್ಧ ಮಲ್ಲಿಕಾರ್ಜುನ,
ಲಿಂಗೈಕ್ಯ/ಸಮಾಧಿ ಸ್ಥಳ–ಸೊಲ್ಲಾಪುರ, ಮಹಾರಾಷ್ಟ್ರ ರಾಜ್ಯ, ಪೂರ್ವಾಶ್ರಮ–ಕುಡುಒಕ್ಕಲಿಗ

## ವಚನ

ಕುರಿಯ ಹೆಸರು ಒಂದೆ, ಅಗ್ನಿಯ ಹೆಸರು ಒಂದೇ ಆದಲ್ಲಿ, ಅಗ್ನಿಯ ಸಾಮರ್ಥ್ಯ ಕುರಿಗೆ
ಬಂದೀತೆನಯ್ಯಾ? ಕಪ್ಪೆಯ ಹೆಸರು ಹಾವಿನ ಹೆಸರು ಒಂದೇ ಆದಲ್ಲಿ, ಹಾವಿನ ಸಾಮರ್ಥ್ಯ ಕಪ್ಪೆಗೆ
ಬಂದೀತೆನಯ್ಯಾ? ನನ್ನ ಹೆಸರು, ನಮ್ಮ ಶಿವಶರಣರ ಹೆಸರು ಒಂದೇ ಆದಲ್ಲಿ
ಅವರ ಸಾಮರ್ಥ್ಯ ಎನಗೆ ಬಂದೀತೆನಯ್ಯಾ? ಕಪಿಲಸಿದ್ಧ ಮಲ್ಲಿಕಾರ್ಜುನಯ್ಯಾ.

**ಅರಿವಿನಕ್ಷರದಾರತಿ**




"ಸಂಗನ ಬಸವಣ್ಣ ಬಂದು ಕಲ್ಯಾಣದಲ್ಲಿ
ಮನೆಯ ಕಟ್ಟಿದರೆ ಮರ್ತ್ಯಲೋಕವೆಲ್ಲವೂ ಭಕ್ತಿ
ಸಾಮ್ರಾಜ್ಯವಾಯಿತ್ತು."



# ನಿಜಲಿಂಗಯೋಗಿ ಶರಣ ಅಜಗಣ್ಣ



## ಸಂಕ್ಷಿಪ್ತ ಪರಿಚಯ

### ಅಜಗಣ್ಣ


ಊರು–ಲಕ್ಕುಂಡಿ, ಗದಗ ಜಿಲ್ಲೆ ಕಾಯಕ–ವ್ಯವಸಾಯ ಕಾರ್ಯಕ್ಷೇತ್ರ–ಮಸಳಿಕಲ್ಲು
ದೊರೆತ ವಚನಗಳು–೧೦ ವಚನಾಂಕಿತ–ಮಹಾಘನ ಸೋಮೇಶ್ವರ ಲಿಂಗೈಕ್ಯ/ಸಮಾಧಿ
ಸ್ಥಳ–ಲಕ್ಕುಂಡಿ, ಗದಗ ಜಿಲ್ಲೆ ಪೂರ್ವಾಶ್ರಮ–ಒಕ್ಕಲಿಗ

## ವಚನ

**ಇನನ ಕಂಡ ತಮದಂತಾಯಿತೆನ್ನ ಗುರುವಿನಪದೇಶ, ವಾಯುವಿನ ಕೈಯ ಸೊಡರಿನಂತಾಯಿತೆನ್ನ ಗುರುವಿನುಪದೇಶ, ಉರಿಯ ಮುಖದೊಳಿಪ್ಪ ಕರ್ಪೂರದಂತಾಯಿತೆನ್ನ ಗುರುವಿನಪದೇಶ. ಮಹಾಘನ ಸೌರಾಷ್ಟ್ರ ಸೋಮೇಶ್ವರನ ಸದ್ಗುರುವೆನ್ನ ಕರಸ್ಥಲಕ್ಕೆ ಕೃಪೆ ಮಾಡಿದ ಕಾರಣ ಸಕಲ ಪ್ರಪಂಚು ಬಿಟ್ಟೋಡಿತ್ತು.**

## ಅರಿವಿನಕ್ಷರದಾರತಿ

"ಅಂಗದಾಶ್ರಯವ ಕಳೆದು, ಲಿಂಗದಾಶ್ರಯವ
ಮಾಡಿದ ಗುರುವೆ ಶರಣು,
ಶರೀಗುರು ಲಿಂಗವೆ ಶರಣು, ಪರಮಸುಖವ
ತೋರಿದೆಯಾಗಿ"






# ನಿಜಭಕ್ತ ಶರಣ ಉಪ್ಪರಗುಡಿಯ ಸೋಮಿದೇವ



## ಸಂಕ್ಷಿಪ್ತ ಪರಿಚಯ


### ಸೋಮಿದೇವ-ಸೋಮಿದೇವಯ್ಯ

ಊರು–ಉಪ್ಪರಗುಡಿ ಕಾಯಕ–ನಂದಿ ಧ್ವಜ ವಾಹಕ (ನಂದಿ ಧ್ವಜ ಹೊತ್ತು ಮೆರವಣಿಗೆಯಲ್ಲಿ ಕುಣಿಯುವುದು)
ವಚನಾಂಕಿತ–ಗಾರುಡೇಶ್ವರ ದೊರೆತ ವಚನ–೧೧

## ವಚನ

ದಾಸ-ದುಗ್ಗಳೆಯರ ತವನಿಧಿ ಪ್ರಸಾದವ ಕೊಂಡೆನಯ್ಯಾ. ಸಿರಿಯಾಳ-ಚೆಂಗಳೆಯರ ಪ್ರಾಣ ಪ್ರಸಾದವನ ಕೊಂಡೆನಯ್ಯಾ. ಸಿಂಧು-ಬಲ್ಲಾಳವರ ಸಮತಾಪ್ರಸಾದವ ಕೊಂಡೆನಯ್ಯಾ. ಬಿಬ್ಬಬಾಚಯ್ಯಗಳ ಸಮಯ ಪ್ರಸಾದವ ಕೊಂಡೆನಯ್ಯಾ. ಮಹಾದೇವಿಯಕ್ಕಗಳ ಜ್ಞಾನ ಪ್ರಸಾದವ ಕೊಂಡೆನಯ್ಯಾ. ನೀಲಲೋಚನೆಯಮ್ಮನವರ ನಿರ್ವಯಲಪ್ರಸಾದವ ಕೊಂಡೆನಯ್ಯಾ. ಇಂತಿ ಏಳ್ನೂರೆಪ್ಪತ್ತಮರಗಣಂಗಳ ಒಕ್ಕುಮಿಕ್ಕ ಬಯಲ ಪ್ರಸಾದವ ಕೊಂಡು ಬದುಕಿದೆನು ಕಾಣಾ ಗಾರುಡೇಶ್ವರಾ.

**ಅರಿವಿನಕ್ಷರದಾರತಿ**




"ಮರನುರಿದು ಬೆಂದು ಕರಿಯಾದ ಮತ್ತ
ಉರಿಗೊಡಲಾದುದ ಕಂಡು,
ಆತ್ಮ ಪರಿಭವಕ್ಕೆ ಒಪ್ಪುದಕ್ಕೆ ಇದೆ ದೃಷ್ಟ"



# ಸಮರತಿಯ ಶರಣ ಆಯ್ದಕ್ಕಿ ಮಾರಯ್ಯ




## ಸಂಕ್ಷಿಪ್ತ ಪರಿಚಯ

### ಮಾರಯ್ಯ

ಸತಿ–ಲಕ್ಕಮ್ಮ ಊರು–ಎರಡೋಣಾ, ರಾಯಚೂರು ಜಿಲ್ಲೆ.
ಕಾಯಕ–ಚೆಲ್ಲಿದ ಕಾಳುಗಳನ್ನು ಆಯ್ದು ತಂದು ಜಂಗಮ ದಾಸೋಹ ಮಾಡುವುದು. (ಆಯಗಾರಿಕೆ)
ಕಾರ್ಯಕ್ಷೇತ್ರ–ಕಲ್ಯಾಣ, ಬೀದರಜಿಲ್ಲೆ ದೊರೆತ ವಚನಗಳು–೩೧ ವಚನಾಂಕಿತ–ಅಮರೇಶ್ವರಲಿಂಗ
ಪೂರ್ವಾಶ್ರಮ–ದಲಿತ ವರ್ಗ

## ವಚನ

ಕಾಯಕದಲ್ಲಿ ನಿರತನಾದಡೆ, ಗುರುದರ್ಶನವಾದಡೂ ಮರೆಯಬೇಕು,
ಲಿಂಗಪೂಜೆಯಾದಡೂ ಮರೆಯಬೇಕು, ಜಂಗಮ ಮುಂದೆ ನಿಂದಿದ್ದಡೂ ಹಂಗು ಹರಿಯಬೇಕು.
ಕಾಯಕವೆ ಕೈಲಾಸವಾದ ಕಾರಣ ಅಮರೇಶ್ವರಲಿಂಗ ವಾಯಿತ್ತಾದಡೂ ಕಾಯಕದೊಳಗು.

ಅರಿವಿನಕ್ಷರದಾರತಿ




"ಮನದಲ್ಲಿ ಹುಟ್ಟಿದ ಅರಿವು ಮಾಡುವ ಮಾಟದಲ್ಲಿ
ಕಾಣಬಹುದು ಶರಣರ ಸಂಗಕ್ಕೆಳಸಿದ ಚಿತ್ತವ
ಅನುಭಾವದಲ್ಲಿ ಕಾಣಬಹುದು."



# ಹರದ ಶ್ರೇಷ್ಠಿ ಶರಣ ಆದಯ್ಯ




## ಸಂಕ್ಷಿಪ್ತ ಪರಿಚಯ

**ಆದಯ್ಯ-ಆದಿಸೆಟ್ಟಿ**

ತಾಯಿ–ಪುಣ್ಯವತಿ ತಂದೆ–ಘೋರದತ್ತ ಸತಿ–ಪದ್ಮಾವತಿ ಊರು–ಸಾಸಲುಗ್ರಾಮ, ಸೌರಾಷ್ಟ್ರ, ಗುಜರಾತ ರಾಜ್ಯ
ಕಾಯಕ–ವ್ಯಾಪಾರ (ಮುತ್ತು ರತ್ನಗಳು) ಕಾರ್ಯಕ್ಷೇತ್ರ–ಅಣ್ಣಿಗೆರೆ –ಪುಲಿಗೆರೆ–ಲಕ್ಷ್ಮೇಶ್ವರ–ಕಲ್ಯಾಣ
ದೊರೆತ ವಚನಗಳು–೪೦೩.

## ವಚನ


**ಮುತ್ತು ನೀರೊಳಗೆ ಹುಟ್ಟಿ ಮರಳಿ ನೀರಾಗದಂತೆ, ತಿಳಿಯ ಕಾಸಿದ ತುಪ್ಪ ಕ್ಷೀರವಾಗದಂತೆ,
ತೊಟ್ಟು ಬಿಟ್ಟ ಹಣ್ಣು ಹೂಮಿಡಿಯಾಗದಂತೆ, ಸಂಸಾರದಲ್ಲಿ ಹುಟ್ಟಿ ಅದ ಹೊದ್ದದೆ,
ಸ್ವಯಂಪ್ರಕಾಶ ಲಿಂಗದ ಬೆಳಗಿನಲ್ಲಿ ಬೆಳೆದು, ತಲ್ಲೀಯವಾಗಿರ್ದರಯ್ಯಾ
ಸೌರಾಷ್ಟ್ರ ಸೋಮೇಶ್ವರಾ, ನಿಮ್ಮ ಶರಣರು.**

## ಅರಿವಿನಕ್ಷರದಾರತಿ

"ಕಾಮಿಸದೆ ಕಲ್ಪಿಸದೆ ಚಿಂತಿಸದೆ (ತೆಗೆಯದೆ)
ಬಯಸದೆ ಎನ್ನನೀವುದಕ್ಕೆ ಮುನ್ನವೆ ತನ್ನನಿತ್ತ
ಸೌರಾಷ್ಟ್ರ ಸೋಮೇಶ್ವರ ಲಿಂಗವ ಕಂಡೆ."



# ನಿಷ್ಠುರತೆಗೆ ಇಂಬಿತ್ತ ಶರಣ ಕಂಬದ ಮಾರಿ ತಂದೆ




## ಸಂಕ್ಷಿಪ್ತ ಪರಿಚಯ

### ಮಾರಿತಂದೆ

ಕಾಯಕ–ಮೀನುಗಾರಿಕೆ ವಚನಾಂಕಿತ–ಕದಂಬಲಿಂಗ
ದೊರೆತ ವಚನಗಳು–೧೧ ಪೂರ್ವಾಶ್ರಮ–ಮೀನುಗಾರ (ಬೆಸ್ತ)

## ವಚನ

**ಮಹಾ ಅಂಬುಧಿಯಲ್ಲಿ ಹರಿವ ಮತ್ಸ್ಯಕ್ಕೆ ನಾನೊಂದು ಬಗೆಯ ಕಂಡೆ ಅದು ಅಡಗುವ ಮಡುವ ನೋಡಿ ತ್ರಿವಿಧವ ಸೊಕ್ಕು ತಂದು ಆ ಮಡುವಿನುದಕದಲ್ಲಿ ಒಡಗೂಡಿ ಕದಡೆ ಆ ಸೊಕ್ಕು ಮತ್ಸ್ಯವ ಮುಟ್ಟದುದಿಲ್ಲ. ಅದೆಂತೆಂದಡೆ: ಅದರ ನಾಸಿಕದ ಉಸುರು ಸೋಕಲಿಲ್ಲ. ಕಂಗಳ ದೃಷ್ಟಿ ಅನಿರಸಂಗೊಳಲಿಲ್ಲ. ಆ ಮತ್ಸ್ಯ ದಂಗದ ಕವಚ ದುಸ್ಸಂಗದ ನೀರ ಮುಟ್ಟದಾಗಿ ಅದು ನಿರಂಗದ ಮತ್ಸ್ಯ. ಸುಸಂಗದ ಹೊಳೆಯಲ್ಲಿ ನಿರತಿಶಯದಿಂದ ತಿರುಗುತ್ತದೇಕೊ?
ಕದಂಬಲಿಂಗನ ಬಲೆಯ ಹೊಲಬ ಕಂಡು.**

ಅರಿವಿನಕ್ಷರದಾರತಿ




**"ಕಾಯದಿಂದ ಸತ್ಕ್ರೀಯ ಕಂಡೆ. ಸತ್ಕ್ರೀಯಿಂದ ಸದ್ಭಾವವ ಕಂಡೆ. ನೀವೆನ್ನ ಕರಸ್ಥಲದಲ್ಲಿ ಮೂರ್ತಿಗೊಂಡ ಕಾರಣ, ನಿಮ್ಮನೆನ್ನ ಸರ್ವಾಂಗದಲ್ಲಿ ಕಂಡೆನಯ್ಯಾ."**



# ಕನ್ನಡಿ ಕಾಯಕದ ಕಲಿ ಶರಣ ಅಮ್ಮಿದೇವಯ್ಯ



## ಸಂಕ್ಷಿಪ್ತ ಪರಿಚಯ

**ಅಮ್ಮಿದೇವಯ್ಯ- ಅಮ್ಮಿದೇವ**

ಸತಿ–ರೇವಮ್ಮ ಕಾಯಕ–ಕ್ಷೌರಿಕ ಕೆಲಸ– ಜನಪದ ವೈದ್ಯ (ನಾಟಿ ವೈದ್ಯ) ಕಾರ್ಯಕ್ಷೇತ್ರ–ಕಲ್ಯಾಣ, ಬೀದರಜಿಲ್ಲೆ
ದೊರೆತ ವಚನಗಳು–೧೦ ವಚನಾಂಕಿತ–ಕಮಳೇಶ್ವರಲಿಂಗ ಪೂರ್ವಾಶ್ರಮ–ಹಡಪದ

## ವಚನ

**ಎನ್ನ ಕನ್ನಡಿ ಒಳ ಹೊರಗಿಲ್ಲ. ಎನ್ನ ಫಳಿಹ ಮುಟ್ಟನೊಳಕೊಂಡ ಚಿರ ಹಡಪಕ್ಕ ಅಳವಲ್ಲ. ಕತ್ತಿನ ಬಸವಣ್ಣ ಕೊಟ್ಟ. ಕತ್ತರಿಯ ಚೆನ್ನಬಸವಣ್ಣ ಕೊಟ್ಟ. ಕಿತ್ತಿ ಹಾಕುವ ಚಿಮ್ಮುಟಿಕೆಯ ಪ್ರಭುರಾಯ ಕೊಟ್ಟ. ಮಿಕ್ಕಾದ ಎನ್ನಯ ಮುಟ್ಟ ಸತ್ಯಶರಣರು ಕೊಟ್ಟರು ದೃಷ್ಟವ ತೋರಿ ಅಡಗುವ ಮುಕುರವ ಕೊಟ್ಟವರ ಹೇಳುವೆನು ದೃಷ್ಟ ಪ್ರಸಿದ್ಧ ಅಪ್ರತಿಮ ಪ್ರಸನ್ನ ಚೆನ್ನಬಸವಣ್ಣ ಪ್ರಿಯ ಕಮಳೇಶ್ವರಲಿಂಗವು ಎನಗೆ ದೃಷ್ಟವ ಕೊಟ್ಟು ತಾ ಬೆಳಗಿನೊಳಗಾದ!**

### ಅರಿವಿನಕ್ಷರದಾರತಿ

**"ಹಿಡಿಯಿಲ್ಲದ ಶಸ್ತ್ರ, ಕೀಲಿಲ್ಲದ ಕತ್ತರಿ
ಉಭಯ ಒಡಗೂಡದ ಚಿಮ್ಮುಟ, ರೂಹಿಲ್ಲದ ಚಣ
ಹಲ್ಲಿಲ್ಲದ ಹಣಿಗೆ, ಮಲವಿಲ್ಲದ ಬೆಳಗಿನ ಮುಕುರವ
ಹಿಡಿದು ಶರಣರೆಲ್ಲರ ಅಡಿವಿಡಿದಾಡ ಬಂದೆ."**

